ಶ್ರೀ ಆರ್.ರೋಶನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು).

ಅ) ಇಲ್ಲ

ಆ) ಸಧ್ಯಕ್ಕೆ ಈ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.

ಪ್ರಾಚೀನ ಸ್ಮಾರಕಗಳ ರಕ್ಷಣೆ ಬಗ್ಗೆ

1671 (2329) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರಪೇಟೆ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಹಿಂದಿನ ರಾಜರುಗಳ ಗದ್ದಿಗೆಗಳು ಶಿಥಿಲವಾಗುತ್ತಿದ್ದು ಇವುಗಳು ಪ್ರಾಚೀನ ಸ್ಮಾರಕಗಳಾಗಿರುವುದರಿಂದ ಇವುಗಳನ್ನು ರಕ್ಷಿಸುವ ಹೊಣೆ ರಾಜ್ಯ ಸರ್ಕಾರದ್ದಲ್ಲವೆ;

ಆ) ಹಾಗಿದ್ದಲ್ಲಿ ಈ ಗದ್ದುಗೆಗಳ ರಕ್ಷಣೆಗಾಗಿ ಯಾವ ವಿಶೇಷ ಕ್ರಮ ಕೈಗೊಳ್ಳಲಾಗುವುದು;

ಇ) ಈ ಗದ್ದುಗೆಗಳ ಸುತ್ತ 2 ಕಿ.ಮೀ.ಜಮೀನಿನಲ್ಲಿ ನಿವೇಶನ ನಿರ್ಮಾಣ ರಚಿಸದಂತೆ ಪ್ರತಿ ಬಂಧಿಸಲಾಗುವುದೇ;

ಈ) ಮಡಿಕೇರಿ ಪುರಸಭೆ ಈ ಗದ್ದುಗೆಗಳ ಸುತ್ತ ನಿವೇಶನ ಮಂಜೂರು ಮಾಡಿದ್ದಕ್ಕೆ ಜನತೆ ಪ್ರತಿಭಟನೆ ಮಾಡಿದ್ದು ಈ ನಿವೇಶನಗಳನ್ನು ರದ್ದುಪಡಿಸಿ ಸ್ಮಾರಕಗಳನ್ನು ರಕ್ಷಿಸಲಾಗುವುದೆ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು).

ಅ) ಹೌದು

ಆ) ಪೂರ್ವಭಾವಿ ಕ್ರಮವಾಗಿ ಈ ಗದ್ದುಗೆಗಳ ರಕ್ಷಣೆಗಾಗಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಯಿಂದ ಗದ್ದುಗೆಗಳ ಜಮೀನಿನ ಸುತ್ತ ಮುಳ್ಳುತಂತಿ ಬೇಲಿಯನ್ನು ಹಾಕಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ನಿಯಮದಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು.

ಈ) ಈ ಬಗ್ಗೆ ಮಡಿಕೇರಿ ಪುರಸಭೆಗೆ ನಿವೇಶನ ಮಂಜೂರಾತಿ ಮಾಡಿ ಪಟ್ಟಾಗಳನ್ನು ಸಾರ್ವಜನಿಕರಿಗೆ ವಿತರಿಸದಂತೆ ಈಗಾಗಲೇ ಸೂಚನೆ ನೀಡಲಾಗಿದೆ.

ರಾಜ್ಯದ ಅನೇಕ ಕಡೆಗಳಲ್ಲಿ ನಿರುಪಯುಕ್ತವಾದ ಅರಣ್ಯ

1672 (2144) ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅನೇಕ ಕಡೆಗಳಲ್ಲಿ ಅರಣ್ಯಕ್ಕೆ ಸೇರಿದ ನಿರುಪಯುಕ್ತವಾದ (ಬೆಲೆ ಬಾಳುವ ಮರಗಳು ಹಾಗೂ ವನ್ಯಜೀವಿಗಳು ಇಲ್ಲದಿರುವುದು) ಜಾಗ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಎಷ್ಟು ಎಕರೆ ಇದೆ;

ಅ) ಈ ನಿರುಪಯುಕ್ತವಾದ ಅರಣ್ಯ ಜಮೀನುಗಳನ್ನು ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದು ನಿರುದ್ಯೋಗಿಬೆಳ ಹಿತದೃಷ್ಟಿಯಿಂದ ಕೈಗಾರಿಕಾ ವಸಾಹತುಗಳನ್ನಾಗಿ ಮಾರ್ಪಾಡು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಜೀವ ವೈವಿಧ್ಯತೆ ದೃಷ್ಟಿಯಿಂದ ಎಲ್ಲಾ ರೀತಿಯ ಅರಣ್ಯ ಪ್ರದೇಶಗಳೂ ಕೂಡ ಪ್ರಾಮುಖ್ಯ. ಆದರೂ ಪೊದೆ ಅರಣ್ಯ ಪ್ರದೇಶ ಒಳಗೊಂಡಂತೆ ಶೇ.10 ಕ್ಕಿಂತ ಕಡಿಮೆ ಸಾಂದ್ರತೆ ಇರುವ ಜಿಲ್ಲಾವಾರು ಅರಣ್ಯ ಪ್ರದೇಶದ ವಿವರ ಈ ಕೆಳಗಿನಂತಿದೆ.

ಜಿಲ್ಲೆಯ ಹೆಸರು	ವಿಸ್ತೀರ್ಣ (ಎಕರೆಗಳಲ್ಲಿ)
1. ಬೆಂಗಳೂರು-ಗ್ರಾಮಾಂತರ	
2. ಬೆಂಗಳೂರು-ನಗರ	120047
3. ಬೆಳಗಾಂ	287155
4. ಬಳ್ಳಾರಿ	25824
5. ಬೀದರ್	108016
6. ಬಿಜಾಪುರ	196014
7. ಚಿಕ್ಕಮಗಳೂರು	332357
8. ದಕ್ಷಿಣ ಕನ್ನಡ	376749
9. ಧಾರವಾಡ	173327
10. ಗುಲ್ಬರ್ಗ	235354
11. ಹಾಸನ	65949
12. ಕೊಡಗು	12350
13. ಕೋಲಾರ	154970
14. ಮಂಡ್ಯ	3653
15. ಮೈಸೂರು	164902
16. ಚಿತ್ರದುರ್ಗ	303882
17. ರಾಯಚೂರು	160735
18. ಶಿವಮೊಗ್ಗ	41496
19. ತುಮಕೂರು	113909

20. ಉತ್ತರ ಕನ್ನಡ		120914
	ಒಟ್ಟು	2930025
	ಅಥವಾ	1186245 ಹೆ.

ಅ) ಇಲ್ಲ

ಪಶು ಔಷಧಿ ಸರಬರಾಜಿಗೆ ಹಣ ನಿಗದಿ

1673 (2382) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಇಲಾಖೆಯ ವಿವಿಧ ಆಸ್ಪತ್ರೆಗಳಿಗೆ ಔಷಧಿ ಸರಬರಾಜು ಮಾಡಲು 1999-2000ನೇ ಸಾಲಿಗೆ ಎಷ್ಟು ಹಣ ನಿಗದಿಪಡಿಸಲಾಗಿತ್ತು: (ಜಿಲ್ಲಾವಾರು ವಿವರ ಒದಗಿಸುವುದು)

ಆ) ಈ ಸಾಲಿನಲ್ಲಿ ನಿಗದಿಪಡಿಸಿದ ಹಣದಲ್ಲಿ ಇದಕ್ಕಾಗಿ ಬಿಡುಗಡೆ ಮಾಡಿದ ಹಣ ಎಷ್ಟು;

ಇ) ಪಶುಸಂಗೋಪನಾ ಇಲಾಖೆ ಶಿವಮೊಗ್ಗ ಜಿಲ್ಲೆ ಆಸ್ಪತ್ರೆಗಳಿಗೆ ಈ ಸಾಲಿನಲ್ಲಿ ಸಾಕಷ್ಟು ಔಷಧಿ ಸರಬರಾಜು ಆಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿಯೇ; ತಕ್ಷಣ ಔಷಧ ಸರಬರಾಜು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು).

ಅ) (ರೂ.ಲಕ್ಷಗಳಲ್ಲಿ) ರಾಜ್ಯವಲಯ - 491.00 (ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಆ) ಜಿಲ್ಲಾ ಪಂಚಾಯತ್‌ನಿಂದ ರೂ.221.35 ಲಕ್ಷಗಳು ಹಾಗೂ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯಿಂದ ರೂ.137.03 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

ಇ) ಜಿಲ್ಲಾ ಪಂಚಾಯತ್ ವತಿಯಿಂದ ರೂ.4.96 ಲಕ್ಷಗಳ ಹಾಗೂ ಕರ್ನಾಟಕ ಕುರಿ ಮತ್ತು ಉತ್ಪನ್ನಗಳ ಅಭಿವೃದ್ಧಿ ಮಂಡಳಿಯಿಂದ ರೂ.25,360-00ಗಳ ಮೊತ್ತದ ಔಷಧಿಯನ್ನು ಒದಗಿಸಲಾಗಿರುತ್ತದೆ. ಈ ವರ್ಷದಲ್ಲಿ ಸಕಾಲದಲ್ಲಿ ಔಷಧಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

1999-2000ನೇ ಸಾಲಿನಲ್ಲಿ ವಿವಿಧ ಪಶುವೈದ್ಯ ಸಂಸ್ಥೆಗಳಿಗೆ ರಾಜ್ಯ ವಲಯದಲ್ಲಿ ನಿಗದಿಪಡಿಸಲಾದ ವಂಟನದ ಜಿಲ್ಲಾವರು ವಿವರ

ಕ್ರಮ ಸಂಖ್ಯೆ	ಜಿಲ್ಲೆಗಳು	ರಾಜ್ಯವಲಯ (ರೂ.ಲಕ್ಷಗಳಲ್ಲಿ)
1)	ಬೆಂಗಳೂರು ನಗರ	7.43
2)	ಬೆಂಗಳೂರು ಗ್ರಾಮಾಂತರ	19.64
3)	ಕೋಲಾರ	24.55